# ಕಾಡಿನೊಳಗೊಂದು ಮನೆಯ ಮಾಡಿ...

**ಅಂದು ಕಾಡಿನಲ್ಲಿ ಪ್ರಾಣಿಗಳ ಪ್ರಾಣಭಯದಲ್ಲಿ ಮಾಡಿದ್ದ ಸಂಸಾರ, ಅನುಭವಿಸಿದ ಕಷ್ಟಗಳು ಇಂದು ಸವಿನೆನಪಿನ ಸಾಲಿನಲ್ಲಿ ಬಂದು ಸೇರಿಹೋಗಿದೆ.**

■ ಪದ್ಮ ಪೂವಯ್ಯ, ಬೆಂಗಳೂರು



ಈ ಫೋಟೊ 30 ವರ್ಷಗಳಷ್ಟು ಹಳೆಯದು. ಫೋಟೋದಲ್ಲಿರೊ ಮನೆ ಅರಣ್ಯಾಧಿಕಾರಿಗಳ ವಸತಿಗೃಹ. ಈ ಮನೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಿಂದ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿದೆ. ಸುತ್ತ ರಬ್ಬರ್ ಕಾಡು. ಮಧ್ಯದಲ್ಲಿ ಮನೆ.

ಈ ಮನೆಯಲ್ಲಿ ಮದುವೆಯ ನಂತರ ಹೊಸದಾಗಿ ಸಂಸಾರ ಹೂಡಿದೆವು. ವರ್ಗಾವಣೆಯ ಗೊಂದಲದಿಂದಾಗಿ ಸ್ವಲ್ಪ ತಡವಾದ್ದರಿಂದ ನಾನಾಗಲೇ ಐದು ತಿಂಗಳ ಗರ್ಭಿಣಿ. ಮೈಸೂರಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮುಗಿಸಿದ್ದ ನಾನು ಈ ಮನೆಗೆ ಬಂದಾಗ ಕಂಗಾಲಾಗಿ ಹೋಗಿದ್ದೆ. ಕಾರಣ ಸುಮಾರು ವರ್ಷಗಳಿಂದ ಯಾವ ಅಧಿಕಾರಿಯ ಸಂಸಾರವು ಅಲ್ಲಿ ವಾಸವಾಗಿರದಿದ್ದರಿಂದ ಅದನ್ನು ಗೋದಾಮವಾಗಿ ಮಾಡಿದ್ದರು. ನಮ್ಮವರು ಅದನ್ನು ಖಾಲಿ ಮಾಡಿಸಿ ಸ್ವಚ್ಛಗೊಳಿಸಿ ವಾಸಕ್ಕೆ ಅಣಿಗೊಳಿಸಿದ್ದರು.

ಈ ಮನೆಗೆ ಮೊದಲನೆ ಸಲ ಸಾಮಾನು ಸರಂಜಾಮುಗಳೊಂದಿಗೆ ಬರುವಾಗ ರಾತ್ರಿಯಾಗಿತ್ತು. ಒಂದೇ ಸಮನೆ ಸುರಿಯುತ್ತಿರುವ ಮಳೆ ವಿದ್ಯುತ್ ಇಲ್ಲ. ಎಲ್ಲೋ ಮನೆ ಹಿಂದೆ ಊಳಿಡುವ ನರಿಗಳು ನಮ್ಮನ್ನು ಸ್ವಾಗತಿಸಿದವು. ಮೊಂಬತ್ತಿಯ ಬೆಳಕಿನಲ್ಲಿ ಸಾಮಾನುಗಳ ರಾಶಿಯ ಮಧ್ಯೆ ಮಲಗಲು ಜಾಗ ಅಣಿ ಮಾಡುವಾಗ ಬಚ್ಚಲು ಮನೆಯ ಬಾಗಿಲ ಸಂಧಿಯಲ್ಲಿ ಇಣುಕುತ್ತಿತ್ತು ಒಂದು ವಿಷಕಾರಿ ಕೊಳಕಮಂಡಲದ ಹಾವಿನಮರಿ. ಮಲೆನಾಡಿನವರಾದ ನನ್ನವರಿಗೆ ತಕ್ಷಣ ಅದರ ಗುರುತು ಸಿಕ್ಕಿ ಗಾಬರಿಯಲ್ಲಿ ಹರಸಾಹಸ ಮಾಡಿ ಹೊರ ಹಾಕಿದರು. ಮಾರನೆ ದಿನ ಸಾಮಾನು ಜೋಡಿಸಿ ಅಡುಗೆ ಮಾಡುತ್ತಿದ್ದೆ. ಮನೆಯ ಮುಂದಿನ ಅಶೋಕಮರದಿಂದ ಸರ ಸರ ಸದ್ದು ಮಾಡುತ್ತ ದೊಡ್ಡಗಾತ್ರದ ಕೇರೆಹಾವೊಂದು ಛಾವಣಿಯ ಮಾರ್ಗವಾಗಿ ಅಡುಗೆ ಮನೆಗೆ ನುಸುಳುತ್ತಿದೆ. ಅದು ವಿಷಕಾರಿಯಲ್ಲವಾದರೂ ಗಾಬರಿ ಬಿದ್ದು ಹೊರಗೋಡಿ ಬಂದೆ. ಕೆಲವರು ಅದನ್ನು ಕೋಲಿನಿಂದ ಬೆದರಿಸಿ ಓಡಿಸಿದರು ನನ್ನ ಕಂಪನ ಕಡಿಮೆಯಾಗಿರಲಿಲ್ಲ. ಮನೆಯಲ್ಲಿ ಹಲವಾರು ವರ್ಷಗಳಿಂದ ಜನರು ವಾಸವಾಗಿರದಿದ್ದರಿಂದ ಎಲ್ಲ ಪ್ರಾಣಿಗಳು ಖಾಯಂ ಸದಸ್ಯರಾಗಿದ್ದರೂಂತ ಕಾಣುತ್ತದೆ. ಅಡುಗೆ ಮಾಡಿಟ್ಟು ಸ್ವಲ್ಪ ಹೊತ್ತಿನಲ್ಲಿ ಹೊರಗಡೆಯಿಂದ ಕಿಟಕಿ ಮೂಲಕ ದಾಂಗುಡಿ ಇಡುತ್ತಿದ್ದ ಕಾಡಿನ ಇರುವೆಗಳು ಹಾಲು, ಸಾರಿನಲ್ಲಿ ಈಜುತ್ತಿರುವುದನ್ನು ನೋಡಿ ತಲೆ ಖಾಲಿಯಾಗಿ ಏನು ಮಾಡಲು ತೋಚದೆ ನಂತರ ದೊಡ್ಡ ಹರಿವಾಣದಲ್ಲಿ ನೀರು ತುಂಬಿ ಮಾಡಿದ ಅಡುಗೆ ಪಾತ್ರೆಗಳನ್ನೆಲ್ಲ ಜೋಡಿಸಿಡೋ ಉಪಾಯ ಕಂಡುಕೊಳ್ಳಬೇಕಾಯಿತು.

ಬೆಳಿಗ್ಗೆ 9 ಗಂಟೆವರೆಗೂ ರಬ್ಬರ್ ಹಾಲು ಸಂಗ್ರಹ ನಡೆಯುತ್ತಿದ್ದರಿಂದ ಚಟುವಟಿಕೆಯಿಂದ ಇದ್ದು ಮನೆ ಸುತ್ತಮುತ್ತ ನಂತರ ನಿರ್ಜನವಾಗಿ ಬಿಡುತ್ತಿತ್ತು. ಮುಖ್ಯ ಕಚೇರಿಗೆ ತೆರಳುತ್ತಿದ್ದ ಯಜಮಾನರು ಬರೋವಾಗ ರಾತ್ರಿ 7 ಗಂಟೆಯಾಗುತ್ತಿತ್ತು. ಮನೆಯೊಳಗೆ ಇದ್ದು ಕಾಲ ಕಳೆಯೋದು ಕಷ್ಟವಾಗ್ತಿತ್ತು. ವೈದ್ಯರ ಸಲಹೆ ಮೇರೆಗೆ ಮನೆ ಮುಂದೆ ವಾಕ್ ಮಾಡೋಣಾಂತ ಶುರು ಮಾಡಿದೆ. ಕೆಲಸದವರು. ಅಮ್ಮ, ರಬ್ಬರ್ ಮರಕ್ಕೆ ಹಾಲು ತೆಗೆಯಲು ಹತ್ತುವವರು ಕೆಲವೊಮ್ಮೆ ಬಿದ್ದು ಮರಣ ಹೊಂದಿರುತ್ತಾರೆ. ಈ ಸ್ಥಿತಿಯಲ್ಲಿ ನೀವು ಒಬ್ಬರೇ ಓಡಾಡಬೇಡಿ ಎನ್ನಲು ಮನೆಯ ಹೊರಗಡೆ ಓಡಾಡೋದಕ್ಕೆ ಮನಸ್ಸು ಮಾಡದೆ ಒಳಗೆ ಇರಲಿಕ್ಕೆ ಶುರುಮಾಡಿದೆ. ಕೊನೆಗೆ ಒಂದು ತಿಂಗಳಿಗೆ ತವರಿಗೆ ಹೊರಟು ಹೋದೆ. ಅರಣ್ಯಾಧಿಕಾರಿ ಮದುವೆಯಾದಾಗ ಇಂಹದ್ದನ್ನು ಎದುರಿಸಬೇಕೆಂದು ಗೊತ್ತಿರಲಿಲ್ಲವೇ ಎಂದು ನಾನು ಅತ್ತಾಗಲೆಲ್ಲ ಮುನಿಸಿಕೊಳ್ಳುತ್ತಿದ್ದ ಯಜಮಾನರು ತವರಿಗೆ ಬಿಟ್ಟು ಬಂದರು.

ಒಂದು ವರ್ಷದ ನಂತರ 5–6 ತಿಂಗಳ ಮಗುವಿನೊಂದಿಗೆ ಬಂದೆ. ತುಂಬು ಕುಟುಂಬದಲ್ಲಿದ್ದ ಮಗು ಕಾಡಿನ ನೀರವತೆಗೆ ಜನಗಳು ಇಲ್ಲದೆ ವಿಪರೀತ ಹಠ ಮಾಡ್ತಾ ಇತ್ತು. ರಾತ್ರಿ ಯಜಮಾನರು ಬರೋದು ತಡವಾಗ್ತ ಇದ್ದು, ವಿಪರೀತ ಗಾಳಿ, ಮಳೆಗೆ ವಿದ್ಯುತ್ ಇರದೆ ಕಿಟಕಿ, ಬಾಗಿಲುಗಳು ಚಿಲಕಗಳು ಸರಿ ಇಲ್ಲದೆ ರಪರಪ ಸದ್ದು ಮಾಡುವಾಗ ಮಗು ಗಲಾಟೆ ಜೋರಾಗ್ತ ಇತ್ತು. ಒಂಟಿಯಾಗಿ ಮಗುವನ್ನು ಸುಧಾರಿಸಲಾಗದೆ ಪರದಾಡುವಾಗ ಚಿಕ್ಕಮಗುವನ್ನು ಇಲ್ಲಿ ನೋಡಿಕೊಳ್ಳುವುದು ಕಷ್ಟ ಎಂದು ಪುನಃ ತವರಿಗೆ ಹೋಗಬೇಕಾಯ್ತು. ಮಗುಗೆ ಒಂದು ವರ್ಷವಾಗುವ ಹೊತ್ತಿಗೆ ಯಜಮಾನರಿಗೆ ಹಾಸನಕ್ಕೆ ವರ್ಗಾವಣೆಯಾಗಿದ್ದರಿಂದ ಪುನಃ ನಾನು ಆ ಮನೆಗೆ ಹೋಗಲಾಗಲಿಲ್ಲ. ಆ ದಿನಗಳಲ್ಲಿ ಕಷ್ಟ ಎನ್ನಿಸುತ್ತಿದ್ದದ್ದು ಈಗ ಸವಿನೆನಪಿನ ಬುತ್ತಿಯಾಗಿ ಕಾಡುತ್ತಿವೆ.

ಈ ಫೋಟೋದಲ್ಲಿರೋ ಬೈಕಲ್ಲಿ ನಾನು ಮಗನ ಗರ್ಭಿಣಿಯಾಗಿದ್ದಾಗ ವೈದ್ಯರ ಹತ್ತಿರ ತಪಾಸಣೆಗೆ ಹೋಗ್ತಾ ಇದ್ದೆ. ನಂತರ ಅದೇ ಬುಲೆಟ್ ಬೈಕ್‌ನಲ್ಲಿ ಅವನು ಕಾಲೇಜಿಗೆ ಹೋಗ್ತಾ ಇದ್ದಾಗ ಹಿಂದಿನ ದಿನಗಳು ನೆನಪಾಗ್ತಾ ಇತ್ತು. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಈ ಭಾರದ ಗಾಡಿ ಓಡಿಸಲು ಕಷ್ಟ ಎಂದು ಅನ್ನಿಸಿ ಈಗ ಮುಸುಕು ಹಾಕಿಕೊಂಡು ಮನೆಯ ಗ್ಯಾರೇಜಿನಲ್ಲಿದೆ.

ಈಗ ನಿವೃತ್ತಿಯ ಅಂಚಿನಲ್ಲಿರೋ ಯಜಮಾನರು ಇದೇ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೋದ ತಿಂಗಳು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗುವಾಗ ಈ ಮನೆಗೆ ಭೇಟಿ ನೀಡಿದೆವು. ನನ್ನ ಮಗನಿಗೆ ಪ್ರತಿಯೊಂದು ಘಟನೆಗಳನ್ನು ಹಂಚಿಕೊಳ್ಳುತ್ತ ಅದೇ ಜಾಗದಲ್ಲಿ ಅವನೊಂದಿಗೆ ಫೋಟೋಗಳನ್ನು ತೆಗೆದುಕೊಂಡು ಸವಿ ಸವಿ ನೆನಪುಗಳ ಗುಂಗಿನಲ್ಲಿ ಕಳೆದುಹೋದೆ. ■